ಮಧ್ಯಂತರ ಅರ್ಜಿಯ ಆದೇಶದ ಮೇರಗೆ ದಿನಾಂಕ 20.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ- ಪ್ರತಿವಾದಿಗಳ ಪರ ವಕೀಲರಾದ ಶ್ರೀ ಎಂ.ಎ.ಕೆ ರವರಿಂದಃ-**

ನಮ್ಮ ಮುಕ್ಕಾಟೀರ ಕುಟುಂಬದ ಸದಸ್ಯರ ಮಧ್ಯೆ ನಾಲ್ಕು ಭಾಗಸ್ತರು ಇದ್ದರು. ನಮ್ಮ ತಂದೆ ಮತ್ತು ಮುಕ್ಕಾಟೀರ ಭೀಮಯ್ಯರವರು ಸಹೋದರರು. ನಮ್ಮ ಮುಕ್ಕಾಟೀರ ಕುಟುಂಬದಲ್ಲಿ ಸುಬ್ಬಯ್ಯ ಯಾನೆ ಚುಬ್ಬಯ್ಯ ಎನ್ನುವವರು ಇದ್ದಿರಬಹುದು. ದಾವಾಸ್ವತ್ತು ಮೂಲತಃ ಮುಕ್ಕಾಟೀರ ಸುಬ್ಬಯ್ಯ ಯಾನೆ ಚುಬ್ಬಯ್ಯ ರವರಿಗೆ ಸೇರಿದ್ದು, ಅದನ್ನು ಭೀಮಯ್ಯ ರವರು ನೋಂದಣಿ ಆಗದ ಕ್ರಯಪತ್ರದಡಿ ಖರೀದಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾಖಲೆಯ ಪ್ರಕಾರ ಕಂದಾಯ ದಾಖಲೆಗಳು ಸುಬ್ಬಯ್ಯ ರವರ ಹೆಸರಿನಲ್ಲಿ ದಾಖಲಾಗಿದ್ದವು ಎಂದರೆ ನನಗೆ ಗೊತ್ತಿಲ್ಲ.

1 ನೇ ಪ್ರತಿವಾದಿ ಗಂಡ ಹಾಗೂ 2 ನೇ ಪ್ರತಿವಾದಿಯ ತಂದೆಯಾದ ಮುತ್ತಣ್ಣರವರು 30 ವರ್ಷಗಳ ಕಾಲ ಬಾಟಾ ಶೋರೂಂ ನಲ್ಲಿ ವ್ಯವಸ್ಥಾಪಕರಾಗಿ ಕರ್ತವ್ಯ ನಿರ್ವಹಿಸಿದ್ದು, ಸದರಿ ವೃತ್ತಿಯಲ್ಲಿ ಬಂದಂತಹ ಆದಾಯವನ್ನು ಭೀಮಯ್ಯರವರಿಗೆ ನೀಡಿ ಅವರ ಮೂಲಕ ದಾವಾಸ್ವತ್ತನ್ನು ಖರೀಸಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಗೆ ಬಿಟ್ಟಂಗಾಲ ಗ್ರಾಮದಲ್ಲಿ ಸರ್ವೆ ನಂ. 184/1 ಹಾಗೂ ಸರ್ವೆ ನಂ. 185/2 ರಲ್ಲಿ ಆಸ್ತಿಗಳು ಇವೆ ಎಂದರೆ ಸರಿ. ಸದರಿ ಆಸ್ತಿಗಳಲ್ಲಿ ನನ್ನ ತಂದೆಯ ಎಲ್ಲಾ ಮಕ್ಕಳಿಗೆ ಸಮನಾದ ಹಕ್ಕು ಇದೆ ಎಂದರೆ ಸರಿ. ಕಂದಾಯ ದಾಖಲೆಗಳನ್ನು ಪ್ರಶ್ನಿಸಿ ನಾನು ತಹಶೀಲ್ದಾರ್ ರವರ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿದ್ದೇನು ಎಂದರೆ ಸರಿ.

ನಾನು ನಮ್ಮ ತಂದೆಯ ಹೆಸರಿನಲ್ಲಿ ಇರುವ ಇತರೆ ಸ್ವತ್ತುಗಳನ್ನು ಈ ದಾವೆಯಲ್ಲಿ ಸೇರಿಸದೇ, ನನ್ನ ಅಣ್ಣ ಖರೀದಿಸಿರುವ ದಾವಾಸ್ವತ್ತನ್ನು

ಕಬಳಿಸುವ ಉದ್ದೇಶದಿಂದ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾಸ್ವತ್ತಿಗೆ ಸಂಬಂಧಿಸಿದ ಕಂದಾಯ ದಾಖಲೆಗಳು ನನ್ನ ತಂದೆ, ನನ್ನ ಮತ್ತು ನನ್ನ ಅಣ್ಣ ಚರ್ಮಣ್ಣರವರ ಹೆಸರಿನಲ್ಲಿ ದಾಖಲಾಗಿರಲಿಲ್ಲ. ದಾವಾಸ್ವತ್ತಿನ ಕಂದಾಯ ದಾಖಲೆಗಳನ್ನು ನನ್ನ ಹೆಸರಿಗೆ ದಾಖಲು ಮಾಡುವಂತೆ ನಾನು ಕಂದಾಯ ಇಲಾಖೆಗೆ ಅರ್ಜಿಯನ್ನು ನೀಡಿರಲಿಲ್ಲ. ಪ್ರತಿವಾದಿಗಳಿಗೆ ಸೇರಿದ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನನಗೆ ಯಾವುದೇ ಹಿಸ್ಸೆ ಇಲ್ಲದೇ ಇದ್ದರೂ ಸಹಾ ನಾನು ಸುಳ್ಳು ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ
(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.